


### ಸಂದರ್ಭೋಚಿತ ಲೇಖನ

'ಹೊಸ ವರ್ಷದ ನಿರ್ಣಯಗಳು ಏನಾದವು?', ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಜ. 11) ಸಂದರ್ಭೋಚಿತವಾಗಿದೆ. 'ನಿಧಾನಿಸು–ನಿಧಾನಿಸು' ಎಂಬುದು ಸರ್ವಕಾಲಕ್ಕೂ ಒಪ್ಪುವ ಮಾತು. ಇಚ್ಛಾಶಕ್ತಿಯು ನಿಯಂತ್ರಿತ ಎಂಬುದನ್ನು ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ.

—ಲಲಿತಾ, ಅಂಬಾಗಿಲು, ಉಪ್ಪುಂದ,
ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ,
ಎಚ್.ಆನಂದಕುಮಾರ್ ಚಿತ್ರದುರ್ಗ, ಸು.ವಿಜಯಲಕ್ಷ್ಮಿ ಶಿವಮೊಗ್ಗ,
ಕೇಶವ ಪ್ರಭು ಶಿವಮೊಗ್ಗ, ಮಧುರ ಸುಬ್ರಹ್ಮಣ್ಯ ಬೆಂಗಳೂರು

### ಸಿಹಿ ಕಹಿ ಹೂರಣ

ನಾವು ನಿರ್ಧರಿಸಿದಂತೆ ಎಲ್ಲವೂ ಆಗುವುದಿಲ್ಲ. ಕೆಲವು ನಡೆದಿರುತ್ತೆ. ಇನ್ನೂ ಕೆಲವು ನಿರ್ಣಯಗಳು ಗಾಳಿಗೆ ತೂರಿ ಹೋಗಿರುತ್ತೆ. ಒಟ್ಟಿನಲ್ಲಿ ಹೊಸ ವರ್ಷ ಬರುತ್ತದೆ, ಹೋಗುತ್ತದೆ. ಜೊತೆ ಜೊತೆಗೆ ಸಿಹಿ–ಕಹಿ ಹೂರಣವನ್ನು ನೀಡುತ್ತದೆ ಅಲ್ಲವೇ?

—ಬೆಳ್ಳಾವೆ ರಮೇಶ್, ಬೆಂಗಳೂರು

### ದೃಢ ನಿರ್ಧಾರ ತೆಗೆದುಕೊಂಡೆ

ಇದೊಂದು ಉಪಯುಕ್ತ ಲೇಖನ. ನಿರ್ಣಯ ತೆಗೆದುಕೊಳ್ಳುವಾಗ ದೃಢ ನಿರ್ಧಾರವೂ ಇರಬೇಕು. 'ಮನಸ್ಸಿದ್ದರೆ ಮಾರ್ಗ' ಎಂಬುದನ್ನು ಅರಿತರೆ ನಿರ್ಧಾರಗಳನ್ನು ಪಾಲಿಸುವುದು ಸುಲಭ. ಈ ಲೇಖನ ಪ್ರಕಟವಾಗಿ ಓದುವ ಮೊದಲೇ ಹೊಸ ವರ್ಷ ಯಾವ ವಾಹಿನಿಯ (ಚಾನೆಲ್) ಧಾರಾವಾಹಿಗಳನ್ನು ವೀಕ್ಷಿಸುವುದಿಲ್ಲ ಎಂದು ಯೋಚಿಸಿದ್ದ ನಾನು ಈಗ ದೃಢ ನಿರ್ಧಾರ ತೆಗೆದುಕೊಂಡು ಧಾರಾವಾಹಿಗಳನ್ನು ವೀಕ್ಷಿಸುವುದನ್ನು ನಿಲ್ಲಿಸಿದ್ದೇನೆ. ಆ ಸಮಯ ನನ್ನ ಓದು, ಬರಹಕ್ಕೆ ಮೀಸಲಾಗಿದೆ.

—ಶಾಂತಾ ನಾಗರಾಜ್ ಕೆ. ಬೆಂಗಳೂರು

### ನಿರ್ಣಯ–ಜನ್ಮ ಸಾರ್ಥಕ!

ಈ ವರ್ಷ ನಾವು ಮಾಡಬೇಕಾದ ನಿರ್ಣಯಗಳನ್ನು ಕರಾರುವಕ್ಕಾಗಿ ನೀವು ಬರೆದಿದ್ದೀರಿ. ಅವುಗಳಲ್ಲಿ ವರ್ಷಕ್ಕೊಂದು ಬಿಡುತ್ತಾ ಹೋದರೂ ನಮ್ಮ ಜನ್ಮಸಾರ್ಥಕ! ಅದರಲ್ಲೂ ಸಾಲ ಮಾಡಬಾರದೆಂಬ ನಿರ್ಣಯ ವರ್ಷ ವರ್ಷವೂ ನವೀಕರಣವಾಗುತ್ತಾ ಸಾಗುತ್ತದೆ. ಸ್ವಯಂ ನಿಯಂತ್ರಣ ಮತ್ತು ತುಡಿತ ವನ್ನು ಬ್ಯಾಲೆನ್ಸ್ ಮಾಡುತ್ತಾ ಜೀವನ ಸಾಗಿಸುವದೇ ಕೆಳ ಮಧ್ಯಮ ವರ್ಗದವರ ಪಡಿಪಾಟಲಾಗಿದೆ.

—ವೀರೇಶ ಬಂಗಾರ ಶೆಟ್ಟರ ಕುಷ್ಟಗಿ

### ವಿಚಾರಧಾರೆಯ ಅನಾವರಣ

'ನಿಮ್ಮೊಡನೆ' ಯಲ್ಲಿ 'ಸೈನಿಕರ ಆತ್ಮಹತ್ಯೆ ಏಕೆ ಹೆಚ್ಚುತ್ತಿದೆ?' (ಬಿ.ಎಂ. ಹನೀಫ್) ಮಾಹಿತಿಪೂರ್ಣವಾಗಿದೆ. ರಾಷ್ಟ್ರರಕ್ಷಣೆಗೆ ಸಿದ್ಧರಾಗಿ ಇಲ್ಲವೇ ಪರಿಸ್ಥಿತಿಯ ಒತ್ತಡದಿಂದ ಸೇನೆಯಲ್ಲಿ ಸೇರಿ ಜೀವನ ತೇಯ್ದು ಸಾಗುತ್ತಾರೆ. ಕುಟುಂಬದ ಸಂಪರ್ಕ ಇರುವಂತೆ, ವ್ಯಕ್ತಿಗೆ ತಕ್ಕ ಕೆಲಸ, ಕೌನ್ಸಿಲಿಂಗ್‌ದಿಂದ ಅಂತಹ ಸೈನಿಕರಿಗೆ ಧೈರ್ಯ ನೀಡುವುದು ಸಾಧ್ಯ. ಲೇಖಕರ ವಿಚಾರಧಾರೆ ಬರಹದಲ್ಲಿ ಚೆನ್ನಾಗಿ ಅನಾವರಣಗೊಂಡಿದೆ.

—ಬಿ.ಎನ್. ಸೊಲ್ಲಾಪುರೆ ಔರಾದ್, ಸುಂದರ್ ಬೆಂಗಳೂರು, ಮೇ.ಗೋ.
ಸುಬ್ಬಣ್ಣ ಮೇಗರವಳ್ಳಿ, ಮಹಾವೀರ ಕಾಸರ ಶಿವಮೊಗ್ಗ

### ಅರ್ಥಪೂರ್ಣ

'ವಿಚಾರ ಲಹರಿ'ಯಲ್ಲಿ 'ವಿದ್ವತ್ತಿನ ಒಳಗುದಿ' (ತೋಷ) ಬರಹ ಅರ್ಥಪೂರ್ಣವಾಗಿದೆ.

—ಕೊಹಿಮ ಬಸರಕೋಡು, ಶ್ರೀನಾಥ್ ಕೊನೇಟಿ

### ಮುತ್ತಿನಂಥ 'ಮಾತು'ಗಳು

'ಮಾತೇ ಮುತ್ತು' ಅಂಕಣದಲ್ಲಿ ಪ್ರಕಟವಾದ ಎಲ್ಲ ಮುತ್ತುಗಳೂ ಒಂದಕ್ಕಿಂತ ಇನ್ನೊಂದು ಚೆನ್ನಾಗಿದೆ. ಅದರಲ್ಲೂ ಹೆನ್ರಿಫೋರ್ಡ್ ನ 'ನನ್ನಲ್ಲಿ ಇರುವ ಅತ್ಯುತ್ತಮವಾದುದನ್ನು ಹೊರಗೆ ತೆಗೆಯುವವನೇ ನನ್ನ ಅತ್ಯುತ್ತಮ ಗೆಳೆಯ' ಎಂಬ ಹೇಳಿಕೆ ಹಾಗೂ ಮಾರ್ಗರೆಟ್ ವಾಕರ್ ಅವರ 'ಹಣ ಹೋಗದೆಡೆಗೆಲ್ಲ ಗೆಳೆತನ ಮತ್ತು ಒಳ್ಳೆಯ ನಡವಳಿಕೆ ನಿಮ್ಮನ್ನು ಕೊಂಡೊಯ್ಯುತ್ತದೆ' ಎಂಬ ಮಾತು ಸದಾ ಸ್ಮರಣೀಯ.

—ನಾರಾಯಣ ಯಾಜಿ, ಶಿರಾಲಿ

### ಚಿಂತನಾರ್ಹ ವಿಚಾರ

'ಫಲಿತಾಂಶ ಮತ್ತು ಶಿಕ್ಷಕ' (ವೇದಾವತಿ ಎಂ.) ಲೇಖನ ವಿಶ್ಲೇಷಣಾತ್ಮಕ ವಾಗಿದೆ. ಖಾಸಗಿ ಶಾಲೆಗಳ ಮತ್ತು ಸರ್ಕಾರಿ ಶಾಲೆಗಳ ಗುಣಮಟ್ಟ ಅಳೆಯುವಲ್ಲಿ ಸಮಾಜ ಅನುಸರಿಸುತ್ತಿರುವ ಕ್ರಮದ ಕುರಿತು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಪರೀಕ್ಷೆಗಳ ಪರಿಣಾಮ ಬಂದಾಗ ನಾವು ಶಾಲೆಗಳನ್ನು ನೋಡುವ ಇಬ್ಬಂದಿ ನೀತಿಯನ್ನು ಎತ್ತಿ ತೋರಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲದ್ದಕ್ಕೂ ಶಿಕ್ಷಕರನ್ನೇ ಹೊಣೆ ಮಾಡುವ ನಮ್ಮ ನೀತಿ ಬದಲಾಗಬೇಕು ಎಂಬ ಲೇಖಕರ ನಿಲುವು ಎಲ್ಲರೂ ಚಿಂತಿಸಬೇಕಾದ ವಿಷಯ.

—ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ

### ಪ್ರವಾಸ ಲೇಖನ

'ಗೋಲ್ಕೊಂಡ ಕೋಟೆಯೊಳಗೆ' (ಜಿ.ಆರ್.ಪಂಡಿತ್ ಸಾಗರ) ಚಿತ್ರ ಬರಹ ಮನಮೋಹಕವಾಗಿದೆ. ಭಾರತದ ಅತಿ ಹಳೆಯ ಕೋಟೆಗಳಲ್ಲೊಂದಾದ, ವಜ್ರಗಳ ತವರೂರು ಎನಿಸಿಕೊಂಡಿರುವ ಹೈದರಾಬಾದಿನ ಗೋಲ್ಕೊಂಡ ಕೋಟೆ ಪರಿಚಯಿಸಿದ ಲೇಖಕರಿಗೆ ಅಭಿನಂದನೆ.

—ಪಿ. ಜಯವಂತ ಪೈ, ಕುಂದಾಪುರ

### ಗುಲ್‌ಮಾರ್ಗ್ ಸೌಂದರ್ಯ

'ಗಿರಿಧಾಮಗಳ ರಾಣಿ ಗುಲ್‌ಮಾರ್ಗ' (ಸುಬ್ಬರಾವ್ ಎಸ್.ಕೆ.) ಲೇಖನ ಅದ್ಭುತ. ಗುಲ್‌ಮಾರ್ಗ್‌ನ ವಿವರಣೆ ಕೇಳುತ್ತಿದ್ದಂತೆ ಖುಷಿಯ ಪರಮಾವಧಿ ಹಂತವನ್ನು ತಲುಪುತ್ತೇವೆ. ಇದೇ ಸಂದರ್ಭ ಪಾಕ್ ಪ್ರೇರಿತ ಉಗ್ರವಾದಿಗಳ ಗುಂಡಿನ ಸದ್ದು ನಮ್ಮನ್ನು ನಡುಗಿಸುತ್ತದೆ. ಸ್ವಿಝರ್ಲೆಂಡ್ ದೇಶದಂತೆ ಯಾವ ಆತಂಕವೂ ಇಲ್ಲದೆ ಗುಲ್‌ಮಾರ್ಗ್‌ನ ಸೌಂದರ್ಯವನ್ನು ಆಸ್ವಾದಿಸುವಂತಾಗಿದ್ದರೆ ಚೆನ್ನಾಗಿತ್ತು.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಮಿನಿ ಕಥೆ ಮಾರ್ಮಿಕ

'ತಾಯಿಯ ತಳಮಳ' (ಸರಸ್ವತಿ ಶಂಕರ್) ಮಿನಿಕಥೆ ಮಾರ್ಮಿಕವಾಗಿದೆ. ಮದರ್ಸ್ ಡೇ ಯ ಸುಳ್ಳು ಗಿಫ್ಟ್ ಕರ್ಣಾಭರಣ ತೋರಿಸಿ ಹೆತ್ತ ಕರುಳು ಮಿಡಿದದ್ದು ಓದಿ ಹೃದಯ ಕರಗಿತು. ತಾಯಿ ಹೃದಯ ಅರಿಯದ ಮಗ ಎಷ್ಟು ಓದಿದ್ದರೇನು ಫಲ?

—ರಾಜಶೇಖರ ಹಾದಿಮನಿ, ಧಾರವಾಡ,
ರುಕ್ಮಿಣಿ ಕೃ. ದೇಶಪಾಂಡೆ ಗೋಕಾಕ

### ಹಿರಿದಾದ ಸಂದೇಶ

ಕಥೆ ಚಿಕ್ಕದಾದರೂ ಹಿರಿದಾದ ಸಂದೇಶವನ್ನು ನೀಡಿತು. ಜೊತೆಗೆ ಮನಮಿಡಿಯಿತು.. ತಾನು ತನ್ನ ಮಕ್ಕಳಿಗೆ 'ಅಮ್ಮನಿಗೆ ವಿಷ್ ಮಾಡಿದಿರಾ?' ಎಂದಾಗಲಾದರೂ ತೇಜಸ್‌ಗೆ ತನ್ನ ಅಮ್ಮನಿಗೆ ವಿಷ್ ಮಾಡಬೇಕೆಂಬುದು ತಿಳಿಯದಿರುವುದು ವಿಪರ್ಯಾಸವೇ ಸರಿ.

—ಬಾಳುಪೇಟೆ ನೀಲಕಂಠಪ್ಪ ಹಾಸನ

### ಭಾವಪೂರ್ಣ

ಮಿನಿ ಕಥೆ ಸರಳ ನಿರೂಪಣೆಯ, ತಾಯಿಯ ತಳಮಳದ ಚಿತ್ರಣದ, ಭಾವ ಪೂರ್ಣ ಕಥೆಯಾಗಿದೆ. ತಾಯಿ ಯಾವಾಗಲೂ ಗ್ರೇಟ್ ಎಂಬ ಸಂದೇಶ ಸಾರುವ ಕಥೆ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

### ನೂರ್ಕಾಲ ಬಾಳಲಿ

ವಂಡರ್ ಪುಟದಲ್ಲಿ (ಪ.ನಾ. ಹಳ್ಳಿ ಹರೀಶ್‌ಕುಮಾರ್ ) ಗಿನ್ನೆಸ್ ದಾಖಲೆ ವೀರನನ್ನು ಪರಿಚಯಿಸಿದ್ದು ಚೆನ್ನಾಗಿದೆ. ಕ್ಯಾಲಿಫೋರ್ನಿಯಾದಲ್ಲಿರುವ 84 ವರ್ಷದ ವೆನಿಸ್‌ನ ಜಿಮ್ ಆರಿಂಗ್ಟನ್ ಅವರ ಸಾಧನೆ ಅಮೋಘವಾದದ್ದು. ಅವರು ನೂರು ಕಾಲ ಬಾಳಲಿ.

—ರವೀಂದ್ರನಾಥ ಶಿ. ಯಡಹಳ್ಳಿ ಬಾಗಲಕೋಟೆ